ಓ.ಎಸ್. ನಂ. 11/2018 ಪಿ.ಡಬ್ಲೂ-1 ಹೆಸರು - ಕೆ.ಎನ್. ನಾಗೇಗೌಡ

ಸಾಕ್ಷಿಯನ್ನು ದಿನಾಂಕಃ 09/04/2021 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ಕೆ.ಎಸ್.ಕೆ. ವಕೀಲರಿಂದಃ

ನೇ ಪ್ರತಿವಾದಿ ಅವರ ತಾಯಿ ಕೆಂಪಮ್ಮ ಎಂದರೆ ಸರಿ. ದಾವಾ ಆಸ್ತಿಯನ್ನು 01.05.1968 ರಲ್ಲಿ ಗ್ರಾಮದ ಗಾಣಿಗಶೆಟ್ಟರ ಮಾದಶೆಟ್ಟರವರ ಮಹ ಶಿವಶೆಟ್ಟಿ ಮತ್ತು ಮೈನರ್ ಮಕ್ಕಳ ಕಡೆಯಿಂದ ಖರೀದಿ ಮಾಡಿರುವ ಆಸ್ತಿ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪಶ್ಚಿಮದ ಕಡೆ ಇರುವ ಪೂರ್ವ-ಪಶ್ಚಿಮ 24 ಗಜ ಮತ್ತು ಉತ್ತರ-ದಕ್ಷಿಣ 15 ಗಜ ರಲ್ಲಿ ಅರ್ಧ ಪಶ್ಚಿಮದ ಭಾಗವನ್ನು ಕೆಂಪಮ್ಮ ಖರೀದಿ ಮಾಡಿದ್ದಾರೆ ಎಂದರೆ ಸರಿ. ಕೆಂಪಮ್ಮ ರವರ ಬದುಕಿದ್ದಾಗ ಆ ಅರ್ಧ ಭಾಗದ ಜಾಗದಲ್ಲಿ ಹೆಂಚಿನ ಮನೆ ಕಟ್ಟಿಕೊಂಡಿದ್ದರು ಎಂದರೆ ಸರಿ. ಮನೆಯ ಪೂರ್ವ ಭಾಗದಲ್ಲಿ ಖಾಲಿ ನಿವೇಶನ ಇದೆ ಎಂದರೆ ಸರಿಯಲ್ಲ. ಕೆಂಪಮ್ಮ ಕಟ್ಟಿದ ಮನೆಯ ಪಶ್ಚಿಮಕ್ಕೆ ಒಂದು ಬಾವಿ ಇದೆ ಎಂದರೆ ಸರಿ.

ಸಾಕ್ಷಿಗೆ ಅಸಸ್ ಮೆಂಟ್ ನಂಬರ್ 129 ದಾವಾ ಆಸ್ತಿಯೂ ಎಂದು ತಿಳಿಸಿದ್ದ ಕಾರಣ, ಸಾಕ್ಷಿ ಮುಂದುವರೆದು ದಾವಾ ಆಸ್ತಿಯಲ್ಲಿ ಕೆಂಪಮ್ಮ ಸ್ವಾಧೀನದಲ್ಲಿ ಇರಲಿಲ್ಲ ಮತ್ತು ಈ ಆಸ್ತಿಗೆ ಸಂಬಂಧ ಪಟ್ಟಂತೆ ಕೆಂಪಮ್ಮ ಖರೀದಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಹೂವಮ್ಮ ಖರೀದಿ ಮಾಡಿರುತ್ತಾರೆ. ಕೆಂಪಮ್ಮ ಖರೀದಿ ಮಾಡಿರುವ ಆಸ್ತಿಯೂ ದಾವಾ ಆಸ್ತಿಯಾಗಿದ್ದು ಅದರಲ್ಲಿ ಕೆಂಪಮ್ಮ ಬದುಕಿದ್ದಾಗ ಅವರು ಸ್ವಾಧೀನದಲ್ಲಿ ಇದ್ದು ನಂತರ ಅವರ ಮಗ ಕರಿಯಪ್ಪ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 1968 ರಲ್ಲಿ ಕೆಂಪಮ್ಮ ಖರೀದಿ ಮಾಡಿರುವ ಆಸ್ತಿ ಮೇಲೆ ನನಗೆ ಮಾಲೀಕತ್ವ ಇಲ್ಲ ಎಂದರೆ ಸರಿ. ದಿನಾಂಕ 04.09.1980 ಕ್ರಯ ಪತ್ರದಲ್ಲಿರುವ ಆಸ್ತಿಯ ಚೆಕ್ಕುಬಂಧಿಯೂ ಮತ್ತು ಕೆಂಪಮ್ಮ ಖರೀದಿ ಮಾಡಿರುವ ಆಸ್ತಿಯ ಚೆಕ್ಕುಬಂಧಿ ಬೇರೆ ಬೇರೆ ಆಗಿರುತ್ತದೆ ಎಂದರೆ ಸರಿ.

ದಾವಾ ಆಸ್ತಿಗೂ ಮತ್ತು ಕೆಂಪಮ್ಮ ಖರೀದಿ ಮಾಡಿರುವ ಆಸ್ತಿಗೂ 150 ಅಡಿ ಅಂತರವಿರುತ್ತದೆ ಎಂದರೆ 5 ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ಕೆಂಪಮ್ಮ ಅವರು ಖರೀದಿ ಮಾಡಿರುವ ಆಸ್ತಿಯ ವಿಸ್ತೀರ್ಣ 15*12 ½ ಇರುತ್ತದೆ ಅದಕ್ಕೆ ಚೆಕ್ಕುಬಂಧಿ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯಲ್ಲಿ ನಾನು ಮನೆ ಕಟ್ಟಿರುವುದಿಲ್ಲ ಹಿತ್ತಿಲಾಗಿ ಇರುತ್ತದೆ. ಖಾತೆ ಮಾಡಿಸಿಕೊಳ್ಳುವಾಗ ಪ್ರತಿವಾದಿಯೂ ತಕರಾರು ಮಾಡಿರುತ್ತಾರೆ. ಪ್ರತಿವಾದಿ ದಾವಾ ಆಸ್ತಿಯಲ್ಲಿ ಅತಿಕ್ರಮ ಪ್ರವೇಶ ಮಾಡಿಲ್ಲ ಮತ್ತು ಸುಳ್ಳು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮತ್ತು ಕೆಂಪಮ್ಮ ರವರ ಆಸ್ತಿ ಅಳತೆ ಮಾಡಿಸಲು ನಾನು ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯೂ ಹೂವಮ್ಮ ರವರ ಹೆಸರಿನಲ್ಲಿ ಇದ್ದು ಇನ್ನು ಅಸಸ್ ಮೆಂಟ್ ಆಗಿರುವುದಿಲ್ಲ. ಕೆಂಪಮ್ಮ ರವರಿಗೆ ಯಾವುದೇ ವಾರಸುದಾರರು ಇಲ್ಲದ ಕಾರಣ ಸುಳ್ಳು ದಾವಾ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಕೆಂಪಮ್ಮ ರವರಿಗೆ ಇಬ್ಬರು ಮಕ್ಕಳು ಹಿರಿ ಮಗ ನಂಜೇಗೌಡ ನನ್ನ ತಂದೆ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು